ವಿಜಯರಾಯರ ಪಾದ

ವಿಜಯರಾಯರ ಪಾದ ನಿಜವಾಗಿ ನಂಬಲು
ಅಜನ ಪಿತನು ತಾನೆ ಒಲಿವಾ ||ಪ|
ದ್ವಿಜಕೇತನ ಗುಣವ್ರಜವ ಕೊಂಡಾಡುವಾ
ಸುಜನ ಮಂದಾರನೀತ-ಪ್ರಖ್ಯಾತ ||ಅ.ಪ||
ವಿ ಎಂದು ನಿಡಿಯಲು ವಿಷಯಲಂಪಟ ದೂರ
ಜ ಎಂದು ನುಡಿಯಲು ಜನನ ಹಾನಿ
ಯ ಎಂದು ಕೊಂಡಾಡೆ ಯಮಭಟರು ಓಡುವರು
ರಾಯ ಎಂದೆನಲು ಹರಿಕಾವಾ-ವರವೀವಾ ||೧|
ಇವರ ಸ್ಮರಣೆಯೆ ಸ್ನಾನ ಇವರ ಸ್ಮರಣೆಯೆ ಧ್ಯಾನ
ಇವರ ಸ್ಮರಣೆಯೆ ಅಮೃತಪಾನ
ಇವರ ಸ್ಮರಣೆಯ ಮಾಡೆ ಯುವತಿಗಕ್ಷಯವಿತ್ತ
ತ್ರಿವಿಕ್ರಮನು ಮುಂದೆ ನಲಿವಾ-ಒಲಿವಾ ||೨||
ವಾರಣಾಸಿಯ ಯಾತ್ರೆ ಮೂರು ಬಾರಿ ಮಾಡಿ
ಮಾರಪಿತನೊಲುಮೆಯನು ಪಡೆದು
ಮೂರವತಾರದಾ ಮಧ್ವಮುನಿರಾಯರ
ಚಾರುಚರಣವನು ಭಜಿಪ-ಮುನಿಪಾ ||೩||
ಪುರಂದರದಾಸರಾ ಪರಮಾನುಗ್ರಹ ಪಾತ್ರ
ಗುರು ವಿಜಯರಾಯನೀತಾ
ಸಿರಿ ವಿಜಯವಿಠಲನ್ನ ಶ್ರೀನಿವಾಸಾಚಾರ್ಯರು
ಹರಿಯಾಜ್ಞೆಯಿಂದ ಕೊಟ್ಟರೂ ದಿಟ್ಟರೂ ||೪||
ದಾನಧರ್ಮದಿ ಮಹಾ ಔದಾರ್ಯಗುಣ ಶೌರ್ಯ
ಶ್ರೀನಿವಾಸನ ಪ್ರೇಮಕುವರಾ
ಮಾನವೀಸೀಮೆ ಚೀಕಲಪರಿನಿವಾಸ ಮೋ
ಹನ್ನವಿಠಲನ ನಿಜ ದಾಸಾ-ಉಲ್ಲಾಸಾ ।।೫।।